## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | **Mohamed Afnan** | |
| ತಂದೆಯ ಹೆಸರು | **Nadeem Pasha** | ಸಾಕ್ಷಿಗೆ ದಿಃ **26.04.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **13** ವರ್ಷ | |
| ಉದ್ಯೋಗ | **Student (6th standard )** | ಪಿ.ಡಬ್ಲ್ಯೂ **-07** |
| ವಾಸ ಸ್ಥಳ | **Mysuru.** | ಸಿ.ಡಬ್ಲ್ಯೂ **-10** |

### ನ್ಯಾಯಾಲಯದ ಪ್ರಶ್ನೇ

1. ಇವತ್ತು ಇಲ್ಲಿಗೆ ನೀನು ಯಾವ ವಿಷಯಕ್ಕಾಗಿ ಬಂದಿದ್ದೀರಾ ?
ಉಃ ನಾನು ನಮ್ಮ ತಾಯಿಯ ಕೊಲೆ ಕೇಸಿನಲ್ಲಿ ಸಾಕ್ಷಿ ನೀಡಲು ಬಂದಿರುತ್ತೇನೆ.

2. ಸುಳ್ಳು ಹೇಳಿದರೆ ಏನಾಗುತ್ತದೆ ?
ಉಃ ನ್ಯಾಯಾಲಯದಲ್ಲಿ ಸತ್ಯವನ್ನೇ ಹೇಳಬೇಕು.

ಸಾಕ್ಷಿಯು ತನ್ನ ವಯಸ್ಸಿಗೆ ತಕ್ಕಂತೆ ಸಮಂಜಸವಾದ ಉತ್ತರ ಕೊಟ್ಟಿದ್ದರಿಂದ ಸಾಕ್ಷಿಯನ್ನು ಸತ್ಯಪ್ರತಿಜ್ಞೆ ಮಾಡಿಸಲಾಯಿತು. ಮುಖ್ಯವಿಚಾರಣೆ ಮಾಡಲು ಅನುಮತಿ ನೀಡಲಾಯಿತು.

### ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿತನು ನನಗೆ ತಂದೆಯಾಗಬೇಕು. ನಾವು ಘಟನೆಗಿಂತ 2 ದಿವಸ ಮೊದಲು ನಾವು ಗಾಯತ್ರಿಪುರಂ ನಲ್ಲಿ ಇರುವ ಮನೆಗೆ ವಾಸ ಮಾಡಲು ಬಂದಿದ್ದೆವು.

ದಿಃ 24.07.2019 ರಂದು ಆರೋಪಿಯಾದ ನನ್ನ ತಂದೆ ಈತನು ರಾತ್ರಿ 11.00 ಗಂಟೆಗೆ ಮನೆಗೆ ಬಂದು ನನ್ನ ತಾಯಿಗೆ ಹಿಂಸೆ ಕೊಟ್ಟಿರುತ್ತಾನೆ. ಆರೋಪಿತನು ನನ್ನ ತಾಯಿಗೆ ಬೈದು ಕೊಲೆ ಮಾಡುತ್ತೇನೆ ಎಂದು ಹೆದರಿಕೆ ಹಾಕಿರುತ್ತಾನೆ.

ದಿಃ 25.07.2019 ರಂದು ಬೆಳಿಗ್ಗೆ ಆರೋಪಿತನು ನನ್ನ ತಾಯಿ ಬೈಯುತ್ತಾ ಕುಳಿತ್ತಿದ್ದನು. ಅದೇ ದಿನ ಬೆಳಿಗ್ಗೆ 10.00 ಗಂಟೆಗೆ ನನಗೆ ಮತ್ತು ನನ್ನ ಸಹೋದರಿಗೆ ನಮ್ಮ ತಾಯಿ ಶಾಲೆಯಲ್ಲಿ ನಮ್ಮನ್ನು ಬಿಟ್ಟು ನಮ್ಮ ತಾಯಿ ಮನೆಗೆ ಹೋದರು, ಮಧ್ಯಾಹ್ನ ನಮ್ಮ ಅಜ್ಜ-ಅಜ್ಜಿ ಶಾಲೆಗೆ ಬಂದು ನನಗೂ ಮತ್ತು ನನ್ನ ಸಹೋದರಿಗೆ ಮನೆಗೆ ಕರೆದುಕೊಂಡು ಹೋದರು. ನಾವು ಮನೆಗೆ ಬಂದು ನೋಡಿದಾಗ ನನ್ನ ತಾಯಿಯ ಕೊಲೆ ಆಗಿತ್ತು. ನಮ್ಮ ತಾಯಿಗೆ ನೋಡಿದಾಗ ಅವರ ಕುತ್ತಿಗೆ ಕಟ್ ಆಗಿತ್ತು.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಸಕಾರಣವಿಲ್ಲದೆ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು